ಸ್ವಲ್ಪ ಅಲ್ಲಿ ಇಲ್ಲಿ ದೇವಸ್ಥಾನಕ್ಕೆ ಹೋಗಬಹುದಾದಷ್ಟು ಸ್ವಾತಂತ್ರ್ಯ ದಕ್ಕಿದೆ. ಆದರೆ, ಈಗಲೂ ಅಷ್ಟೇ – ಈ ಮುದುಕಿಗೆ ಏನೇನು ಇಷ್ಟವಿಲ್ಲ ತಾನು ಹಾಗೆಲ್ಲ ಹೋಗುವುದು. ಮನೆ ಬಿಟ್ಟು ಊರೂರು ಸುತ್ತುತ್ತಾಳೆ ಎಂದು ಕಂಡ ಕಂಡವರಲ್ಲಿ ಹೇಳುವುದು ತನಗೂ ತಿಳಿದಿದೆ. ಆದರೆ ತನ್ನ ಮುಂದೆ ಸಣ್ಣಕ್ಕೆ ಕುಂಯ್ ಕುಂಯ್ ಮಾಡುವುದು ಬಿಟ್ಟರೆ ಮತ್ತೇನೂ ಹೇಳುವುದಿಲ್ಲ. ಯಾಕೆಂದರೆ ಆಕೆಯ ಎಲ್ಲ ಅಕ್ಕತಂಗಿಯರೂ ವೃದ್ಧಾಶ್ರಮದಲ್ಲಿದ್ದಾರೆ. ಬಹುಶಃ ಅದೇ ಭಯ. ಅದೂ ಅಲ್ಲದೇ ತಾನು ಹೋಗುತ್ತಿರುವುದೇನು ಊರು ಸುತ್ತುವುದಕ್ಕಲ್ಲ, ದೇವರ ಕೆಲಸಕ್ಕೆ. ಗುರುಗಳು ದಿನಾ ಹೇಳುತ್ತಾರೆ, 'ನಾವೀಗ ಮಾಡುತ್ತಿರುವ ಕೆಲಸ ಲೋಕ ಕಲ್ಯಾಣಕ್ಕೆ' ಎಂದು. ಕೆಲಸ ಮೊದಲಿಗೆ ಶುರು ಮಾಡಿದಾಗ ಎಷ್ಟೆಲ್ಲ ಕಷ್ಟ ಎನ್ನಿಸಿತ್ತು. ಆ ನಂತರ ಎಷ್ಟು ಹಗುರ. ದೇವರು ತನ್ನ ಕೆಲಸವಾದರೆ ಎಷ್ಟು ಸಲೀಸಾಗಿ ಮಾಡಿಸಿಕೊಳ್ಳುತ್ತಾನೆ ಎಂದು ಗುರುಗಳು ಹೇಳುವುದು ಸತ್ಯ. 'ಹರಿ ನಾಮ ಸ್ಮರಣೆಯೊಂದೇ ಸಾಕು, ಭವದ ಕ್ಲೇಶ ಕಳೆಯಲು. ಹದಿನೈದು ದಿನ ಹೋಗಿದ್ದೇ ಗೊತ್ತಾಗಲಿಲ್ಲ. ತಾನಾಗಿಯೇ ಹೆಂಗಸರು ತಾ ಮುಂದು, ನಾ ಮುಂದು ಎಂದು ಬಂದರು. ಸದ್ಯ ಬಂದವರೆಲ್ಲ ಮುತ್ತೈದೆಯರೆ. ಇನ್ನು ಯಾರಾದರೂ ಅಮಂಗಳೆಯರು ಬಂದಿದ್ದರೆ... 'ಛೇ, ದೇವರ ದಯೆ. ಹಾಗಾಲಿಲ್ಲ, ಹಾಗೇನಾದರೂ ಬಂದಿದ್ದರೆ ಅವರನ್ನು ಅಲ್ಲಿಂದ ಕಳಿಸುವುದು ಹೇಗೆ ಎಂದು ಯೋಚಿಸಬೇಕಾಗುತ್ತಿತ್ತು.' ಆದರೂ ಆ ದಿನ ಅರಿಸಿನ ಕುಂಕುಮ ಪೊಟ್ಟಣ ಕಟ್ಟುವಾಗ ಪಕ್ಕದ ಬೀದಿಯ ವಾರಿಜಮ್ಮ ಬಂದೇ ಬಿಟ್ಟಿದ್ದರಲ್ಲ. ಅವರನ್ನು ಎಬ್ಬಿಸಿ ಕಳಿಸುವಷ್ಟರಲ್ಲಿ ಅಲ್ಲಿದ್ದ ಹತ್ತು ಮಂದಿಗೂ ಸಾಕು ಸಾಕಾಗಿತ್ತು. ಹತ್ತು ಜನ ಸಾವಿರ ಅರಿಸಿನ ಪೊಟ್ಟಣ ಕಟ್ಟಿದೆವಲ್ಲ... ಆಗ ಆ ರಾಮನೇ ಜೊತೆಗಿದ್ದ. ಅಷ್ಟೇ ಏನು ಸಾವಿರ ಜನ ಮುತ್ತೈದೆಯರಿಗೆ ಬ್ಲೌಸ್ ಪೀಸ್ ಹುಡುಕಿ ಹುಡುಕಿ ತರುವಷ್ಟರಲ್ಲಿ ಕಾಲು ಸೋತೆ ಹೋಗಿತ್ತು. ಆದರೆ ಪಾಪ ಯಾವ ಮನೆಯವರೂ 'ಇಲ್ಲ' ಎನ್ನಲಿಲ್ಲ. ದೇವರ ಕಾರ್ಯಕ್ಕೆ ಇಲ್ಲ ಎನ್ನುತ್ತೇವೆಯೇ? ಎನ್ನುತ್ತ ತೆಗೆದು ತೆಗೆದು ಕೊಟ್ಟರು. ಅಂತೂ ಎಲ್ಲ ಕೆಲಸ ಅಚ್ಚುಕಟ್ಟಾಯಿತು. ಹೀಗೆಲ್ಲ ಏನೆಲ್ಲ ಯೋಚಿಸುತ್ತ ಒಂದೊಂದೇ ಪಾತ್ರೆಗಳ ತೊಳೆಯುತ್ತಲೇ ಇದ್ದಳು ಕೌಸಲ್ಯ...

"ಅರೆ ಗಂಟೆ ಎಷ್ಟಾಯಿತು?" ಎಂದು ಮತ್ತೆ ಗಡಿಯಾರ ನೋಡಿದಳು. ಒಂಬತ್ತುವರೆ, ಹತ್ತುಗಂಟೆಯ ಒಳಗೆ ಇರಬೇಕು, ತಾನು ತನ್ನ ಸಮಿತಿಯವರೆಲ್ಲ ಮುಂದಿನ ಸಾಲಿನಲ್ಲಿ ಕಲಶ ಹಿಡಿದು ನಿಲ್ಲಬೇಕು. ಆ ಮೇಲೆ ಮೆರವಣಿಗೆ ಎರಡು ಕಿ.ಮೀ. ವರೆಗೆ. ಅಬ್ಬಾ ಈ ಉರಿಬಿಸಿಲಿನಲ್ಲಿ ಹೇಗೆ ನಡೆಯುವುದು ಆ ರಾಮಚಂದ್ರನೇ ನಡೆಸಬೇಕು. ಎಲ್ಲರು ಹಸಿರು ಸೀರೆಯನ್ನೇ ಉಡಬೇಕು ಎಂದು ಮೊನ್ನೆಯೇ ಅಧ್ಯಕ್ಷೆ ಹೇಳಿದ್ದಾಳೆ. ಪಾಪ ಅವಳು, ಅವಳ ಗಂಡನಿಗೆ ಸಿಕ್ಕಾಪಟ್ಟೆ ಅನುಮಾನ ಅಂತೆ... ಆದರೂ ಎಷ್ಟೊಂದು ಜವಾಬ್ದಾರಿ ವಹಿಸಿಕೊಳ್ಳುತ್ತಾಳೆ. ಮೊನ್ನೆ ಒಂದಿನ ತಡವಾಗಿ ಮನೆಗೆ ಹೋಗಿದ್ದಕ್ಕೆ ಬೆಲ್ಟಿನಲ್ಲೇ ಹೊಡೆದನಂತೆ, ಗಾಯ ತೋರಿಸಿ ಅತ್ತಳು. 'ಹಸಿರು ಸೀರೆ, ಇನ್ನು ಇಸ್ತ್ರೀ ಮಾಡಿಯೇ ಇಲ್ಲ' ಎಂದುಕೊಂಡು ಎಗ್ಗಿಲ್ಲದೆ ಅವಳ ಯೋಚನಾ ಲಹರಿ ಹರಿಯುತ್ತಲೇ ಇತ್ತು. ಆದರೆ ಅದಕ್ಕೆ ತಡೆ ಬಿದ್ದ ಹಾಗೆ ಬಾಗಿಲಿನ ಸದ್ದಾಯಿತು. "ಇದ್ಯಾರಪ್ಪ ಶನಿಗಳು ಇದೇ ಹೊತ್ತಿನಲ್ಲಿ" ಎಂದು ಬೈದುಕೊಂಡೇ ಇಣುಕಿದಳು.

"ಅಕ್ಕಯ್ಯಮ್ಮ..." ಅಯ್ಯೋ ದೇವರೆ ಇವಳ್ಯಾಕೆ ಈಗ ಬಂದಳಪ್ಪ. ಮನಸ್ಸಿನಲ್ಲೇ ಗೊಣಗುಟ್ಟಿ ಬಾಗಿಲು ತೆರೆದಳು.

"ಬಾ ಬಾ ಅಕ್ಕಯ್ಯಮ್ಮ" ಎಂದು ಮುಖದ ಸುಕ್ಕು ಕೊಂಚವೂ ತೋರಿಸಿಕೊಳ್ಳದೆ ಕರೆದಳು.

ಪಾಪ ಅಕ್ಕಯ್ಯಮ್ಮನಿಗೆ ಯಾರೂ ದಿಕ್ಕಿಲ್ಲ, ಹದಿಮೂರೇ ವರ್ಷಕ್ಕೆ ಮದುವೆಯಾಯಿತು,